ನ್ಯಣವಾಗಿರ ಟಗರನ್ನ ನೋಡ್ಕೆಂಡು ತಂದು ಮನೆ ಮುಂದುಕ್ಕೆ ಕಟ್ಕೆಂಡಿದ್ರು. ವಾರದ ಹಿಂದಿನಿಂದಲೂ ಸಾಹೇಬ್ರಿಗೆ ಫೋನ್ ಮಾಡ್ಕೆಂಡು ಇಲ್ಲಿಂದಲೇ ಆಫೀಸ್ಗೆ ಹೋಗಿವಂತೆ ಬಂದೋಗಪ್ಪ ಅಂದಿದ್ರು.

ಇದಕ್ಕೆ ತಕ್ಕನಾಗಿ ಸಾಹೇಬ್ರು ಕೂಡ ದೊಡ್ಕೆರೆ ಯಮ್ಮನ ಜಾತ್ರೆಗೆ ತಕ್ಕಂತೆ ದಿನಚರಿಯನ್ನ ಹೊಂದಿಸಿ ಕೊಂಡಿದ್ದರು. ಭಾನದ ದಿನವೇ ಸಕುಟುಂಬ ಸಮೇತರಾಗಿ ಇಳಿದುಕೊಂಡ ಸಾಹೇಬ್ರು ಹಳೆ ಒಡನಾಟವನ್ನು ಮೆಲುಕುತ್ತ ಲುಂಗಿ ಬಟ್ಟೆಲೆ ಊರ್‍ತುಂಬ ತಿರುಗಾಡಿ, 'ನಮ್ಮ ಚಯರ್‌ಮ್ಯಾನ್ರ ಅಳಿಯ ದೊಡ್ಡ ಅಧಿಕಾರಿಯಾದ್ರು ಹಳೆದ ಯಾವ್ದನ್ನ ಮರ್‍ತಿಲ್ಲ' ಅಂತ ಊರವರಿಂದ ಮೆಚ್ಚುಗೆಗೆ ತುತ್ತಾದರು. ರಾತ್ರಿಗೆ ಭರ್ಜರಿ ಊಟ. ಬಂದ ನೆಂಟರು ಹಿತೈಶಿಗಳಿಗೆಂದು ಟೇಬಲ್ಲು ಚೇರು ಸೇರ್‍ಸಿ ಶ್ಯಾಮಿಯಾನದ ಅಡಿಲಿ ಊಟದ ವ್ಯವಸ್ಥೆ ಮಾಡಿಸಿದ್ದರು. ಅಪರೂಪದ ಸಾಹೇಬ್ರಿಗೆಂದು ಮನೆಯೊಳಗೇ ವಿಶಾಲವಾದ ಟೇಬಲ್ ಹಾಕ್ಸಿ ಸಕಲವೂ ಉಳ್ಳ ಭೋಜನದ ವ್ಯವಸ್ಥೆ ಮಾಡಿದರು. ಪತ್ನಿಯ ಜೊತೆಗೂಡೆ ಊಟಕ್ಕೆ ಕೂತ ಸಾಹೇಬ್ರಿಗೆ ಸಾಕು ಸಾಕು ಎಂದ್ರು ಬಿಡದೆ ಚಯರ್‌ಮ್ಯಾನ್ರು ಚನ್ನಾಗಿರ ಮೂಳೆಗೆ ಮಾಂಸ ಅತ್ಕೆಂಡಿರ ತುಂಡುಗಳನ್ನ ಹಾಕ್ಸಿ ನೆಲ್ಲಿ ಮೂಳೆ ಮಾಂಸನ ತೋಡಾಕ್ಸಿ ಊಟ ಮಾಡ್ಸಿದರು. ಡಯಟ್ಟು ಅದು ಇದು ಅಂತ ತಲೆ ಕೆಡಿಸಿಕೊಂಡಿದ್ದ ಸಾಹೇಬ್ರು ಇತ್ತೀಚಿನ ವರ್ಷಗಳಲ್ಲಿ ಇಂಥ ಭೋಜನ ಸವಿದದ್ದೆ ಇಲ್ಲ. ಜೋರಾಗಿ ಎಲೆ ಅಡಿಕೆ ಮೀಯ್ದು, ಬಾಯಿ ಕೆಂಪಗೆ ಮಾಡಿಕೊಂಡು ಉಂಡಿದ್ದು ಕರಗಲೆಂದು ಒಂದೆರಡು ರೌಂಡ್ ತಿರುಗಾಡಿಕೊಂಡು ಬಂದು ಇವರಿಗೆಂದು ಕೊಟ್ಟಿದ್ದ ವಿಶಾಲವಾದ ರೂಮಿನಲ್ಲಿ ನಿದ್ರೆ ಹೋದರು.

ಇನ್ನ ಬೆಳಗ್ಗೆ ಎದ್ದ ಸಾಹೇಬ್ರಿಗೆ ಆಫೀಸ್ ಕಡೆ ಗೀಳು ಹತ್ತಿ ತಕ್ಷಣವೇ ಹೊರಡೋಣವೆಂದು ಬಾತ್ ರೂಮ್ ಹುಡಿಕಿ ಹೊರಟರು. ಬಾತ್ ರೂಮ್ನಲ್ಲಿ ಎಷ್ಟೊತ್ತು ಕೂತರೂ ಅದು ಆಚೆಗೆ ಹೊಲ್ಡಲೇ ಇಲ್ಲ. ಇದೇನು ಇಂಗಾತಲ್ಲ ಅಂತ ತೊಳಕಳುವ ಶಾಸ್ತ್ರ ಮುಗಿಸಿ ಆಚೆ ಬಂದರು. ಇಂಗಾದ್ರೆ ಸರಿಯಾಗಲ್ಲ. ಇನ್ನು ಟೈಮ್ ಐತೆ ಇದನ್ನ ಖಾಲಿ ಮಾಡಿಯೇ ಕಛೇರಿಗೆ ಹೋಗೋಣವೆಂದು ತೀರ್ಮಾನಿಸಿ ಅದಕ್ಕೆಂದು ಊರಿಗೆ ಅತ್ತುಂಡೆಯಾಗೇ ಇದ್ದ ಮಾವನವರ ತೋಟದ ಕಡೆಗೆ ನಡೆದೇ ಹೊರಟರು. ಒಂದಷ್ಟು ದೂರ ನಡೆದು ಹೋದರೆ ವಿಸರ್ಜನೆ ಸುಲಭವಾಗಲೂ ಬಹುದೆಂಬ ಲೆಕ್ಕಾಚಾರವೂ ಇತ್ತು. ತೆಂಗಿನ ತೋಟ ಹೊಕ್ಕ ಸಾಹೇಬ್ರು ತಾವು ಬಾಲ್ಯದಲ್ಲಿ ಮರೆಗೋಗುತ್ತಿದ್ದ ತೋಟದ ಕೊನೆಯ ಬೇಲಿ ಸಂದಿಗೆ ಹೋಗಿ ಕೂತರು. ಅದೆಷ್ಟೊತ್ತು ಕೂತರು ಅದು ಇಣುಕಲೇ ಇಲ್ಲ. ತಥ್ ಇಂಗಾಯಿತಲ್ಲ ಎಂದು ಅನಿವಾರ್ಯವಾಗಿ ಮೇಲೆದ್ದ ಸಾಹೇಬ್ರು ಇನ್ನೊಮ್ಮೆ ಪುಕ್ಸಟ್ಟೆ ನೀರಿನ ಶಾಸ್ತ್ರ ಮುಗಿಸಿ ಮನೆಕಡೆ ದಾರಿ ತುಳಿದರು. ಅಂಡೆ ಒಲೆಯ ಬಿಸಿನೀರಿನ ಸ್ನಾನ ಮುಗಿಸಿದ ಸಾಹೇಬ್ರಿಗೆ ಮಾವನವರು ಮತ್ತೊಮ್ಮೆ ರಾತ್ರಿಯದ್ದೇ ಮಾಂಸದ ಸಾರಿಗೆ ಬಿಸಿ ಬಿಸಿ ಮುದ್ದೆ ಮಾಡಿಸಿ ಬಡಿಸಿಸಿದರು. ಇನ್ನೊಮ್ಮೆ ಅದೇ ಸಾರಲ್ಲಿ ಬೇಡ ಎಂದುಕೊಂಡರೂ ಮಾವನ ಪ್ರೀತಿಯ ಮುಂದೆ ಇವರ ಯಾವ ಬಾಣವೂ ನಡೆಯುತ್ತಿರಲಿಲ್ಲವಾದ್ದರಿಂದ ಮತ್ತದೇ ಭೋಜನ, ಅಂಥದ್ದೆ ಸತ್ಕಾರ.

ಸಾಹೇಬ್ರು ತಮ್ಮ ಪತ್ನಿಗೆ ಡ್ಯೂಟಿ ಮುಗಿಸ್ಕೆಂಡು ಬರ್‍ತಿನಿ ಸಂಜೆಗೆ ಹೊರಟಿರು, ಇಲ್ಲಿಂದಲೆ ಹೋಗೋಣವೆಂದು ತಿಳಿಸಿ ಆಫೀಸ್ ಕಾರು ಏರಿ ಹೊರಟರು. ನಿನ್ನೆಯಿಂದ ಮಾವನ ಮನೆಯ ಸತ್ಕಾರದಿಂದ ಮೈಮರೆತಿದ್ದ ಸಾಹೇಬ್ರಿಗೆ ಮಾರ್ಗ ಮಧ್ಯದಲ್ಲಿ ಇಂದು ತಾನು ಮಾಡಬೇಕಿರುವ ಮೊದಲ ಕಾರ್ಯ ಏನೆಂದು ನೆನಪಾಯಿತು. ತಿಪ್ಪಾಪುರದ ಆ ಮೇಷ್ಟ್ರು ಮೇಲೆ ಬಂದಿರುವ ದೂರು, ಕಛೇರಿಯಲ್ಲೆ ಮೇಷ್ಟ್ರು ಇಟ್ಟುಕೊಂಡಿರುವ ಬೀರು ಬಾಟಲಿಗಳ ಚಿತ್ರ ಕಣ್ಮುಂದೆ ಬಂದು ತಮ್ಮೊಳಗಿನ ಖಡಕ್ ಅಧಿಕಾರಿ ಎಚ್ಚರಗೊಂಡ. ಡ್ರೈವರ್‌ಗೆ ತಿಪ್ಪಾಪುರದ ಕಡೆಗೆ ಗಾಡಿ ತಿರುಗಿಸಲು ಹೇಳಿದರು. ಈ ಮಧ್ಯೆ ಗೇಟ್ ಒಂದರಲ್ಲಿ ಸಾಹೇಬರ ಬರುವನ್ನೇ ಕಾದಿದ್ದ ಈ ಭಾಗದ ಕಿರಿಯ ಅಧಿಕಾರಿಗಳು ಕಾರಿನ ಹಿಂಬದಿಗೆ ಹತ್ತಿಕೊಂಡರು. ಸಾಹೇಬರ ಕಾರು ಮುಂದಾಯಿತು. ಇನ್ನೇನು ತಿಪ್ಪಾಪುರ ಇಲ್ಲಿಂದ ಅರ್ಧಗಂಟೆ ಪ್ರಯಾಣಕ್ಕೆ ಸಿಗುತ್ತದೆ ಎಂದಾಗ ಸಾಹೇಬ್ರಿಗೆ ಮೆತ್ತಗೆ ಗುದದ ಕಡೆ ಭಾರವಾದಂತಾಯಿತು. ಅಲ್ಲಿಂದ ಹೊರಟ ಗ್ಯಾಸ್ ಅನ್ನು ಮೆತ್ತಗೆ ಬೀಳ್ಕೊಟ್ಟರು. ಪುಣ್ಯಕ್ಕೆ ಯಾವುದೇ ಶಬ್ದ ಬಾರದಿದ್ದುದರಿಂದ ಸಮಾಧಾನಗೊಂಡರು. ಆದರೆ, ಅದಾದ ಕ್ಷಣಮಾತ್ರಕ್ಕೆ ಕಾರ್ ಒಳಗಿನ ಘಮಲು ಬದಲಾಗಿ ಇನ್ಯಾವುದೋ ಆವರಿಸಿಕೊಂಡತಾದುದು ಸಾಹೇಬ್ರುನ್ನ ಚಕಿತಗೊಳಿಸಿತು. ಡ್ರೈವರ್ ಕಡೆಯ ಕಿಟಕಿ